# ಮೆಸ್ಸಿಯ ಆದಾಯ!

ಒಬ್ಬ ಮನುಷ್ಯನ ಬಳಿ ಅತ್ಯಧಿಕ ದುಡ್ಡು ಶೇಖರಣೆಯಾದರೆ ಆತ ಏನು ಮಾಡುತ್ತಾನೆ? ಎನ್ನುವ ಪ್ರಶ್ನೆಗೆ ಒಂದು ಉತ್ತರ– ಆತ ತೆರಿಗೆ ತಪ್ಪಿಸುತ್ತಾನೆ– ಎಂದೇ ಕೊಡಬಹುದು! ವಿಶ್ವ ಫುಟ್‌ಬಾಲ್ ಕ್ರೀಡೆಯ ಸಾರ್ವಕಾಲಿಕ ಶ್ರೇಷ್ಠ ಆಟಗಾರನೆಂದೇ ಸದ್ಯಕ್ಕೆ ಜಗತ್ತಿನಾದ್ಯಂತ ಪರಿಚಿತನಾಗಿರುವ ಅರ್ಜೆಂಟೀನಾದ ಲಯೊನೆಲ್ ಮೆಸ್ಸಿಯ ಉದಾಹರಣೆಯನ್ನೇ ತೆಗೆದುಕೊಳ್ಳಿ. ಸದ್ಯಕ್ಕೆ ಈತನ ನಿವ್ವಳ ಆಸ್ತಿ ಮೊತ್ತ 3500 ಲಕ್ಷ ಅಮೆರಿಕನ್ ಡಾಲರ್. ಆದರೆ ಆತ 2007ರಿಂದ 2009ರವರೆಗೆ ಸರಕಾರಕ್ಕೆ 46 ಲಕ್ಷ ಡಾಲರ್ ತೆರಿಗೆ ವಂಚನೆ ಮಾಡಿದ ಆರೋಪದಲ್ಲಿ ಇದೀಗ ಸ್ಪೇನ್‌ನ ಸುಪ್ರೀಂಕೋರ್ಟ್‌ನಿಂದ 21 ತಿಂಗಳ ಜೈಲು ಶಿಕ್ಷೆ ಮತ್ತು 22.4 ಲಕ್ಷ ಡಾಲರ್ ದಂಡಕ್ಕೆ ಗುರಿಯಾಗಿದ್ದಾನೆ! ದೊಡ್ಡವರ ಸಣ್ಣ ಬುದ್ಧಿ ಎನ್ನುವುದು ಇದಕ್ಕೇ ಇರಬಹುದೆ?

ಬಾರ್ಸಿಲೋನಾ ನ್ಯಾಯಾಲಯ ಈತ ತೆರಿಗೆ ವಂಚನೆ ಮಾಡಿರುವುದು ನಿಜ ಎಂದು ಮೊದಲು ತೀರ್ಪು ನೀಡಿತ್ತು. ಅದರ ವಿರುದ್ಧ ಮೆಸ್ಸಿ ಸುಪ್ರೀಂಕೋರ್ಟಿಗೆ ಅಪೀಲು ಸಲ್ಲಿಸಿದ್ದ. ಈಗ ಸುಪ್ರೀಂಕೋರ್ಟ್ ಕೂಡಾ ತೆರಿಗೆ ವಂಚನೆ ಮಾಡಿದ್ದು ನಿಜ ಎಂದು ಕೆಳಕೋರ್ಟಿನ ತೀರ್ಪನ್ನು ಎತ್ತಿ ಹಿಡಿದಿದೆ. ಕೋರ್ಟ್‌ನಲ್ಲಿ ಸಾಕ್ಷ್ಯ ಹೇಳುವಾಗ ಮೆಸ್ಸಿಯ ಸಮರ್ಥನೆ ತಮಾಷೆಯಾಗಿತ್ತು. ‘ನನಗೆ ಫುಟ್‌ಬಾಲ್ ಬಿಟ್ಟರೆ ಬೇರೇನೂ ಗೊತ್ತಿಲ್ಲ’ ಎಂದು ಆತ ಹೇಳಿದ್ದ. ನ್ಯಾಯಾಧೀಶರು, ‘ಪ್ರತಿವರ್ಷ ಇಷ್ಟೊಂದು ದೊಡ್ಡ ಮೊತ್ತದ ಆದಾಯ ಪಡೆಯುವವನಿಗೆ ಆದಾಯ ತೆರಿಗೆ ಕಟ್ಟಬೇಕೆಂಬುದು ಗೊತ್ತಿಲ್ಲವೆ? ಇದೆಂತಹ ತರ್ಕ?’ ಎಂದು ಕಿಡಿ ಕಾರಿದ್ದರು!

ಆದರೆ ಮೆಸ್ಸಿ ಅದೃಷ್ಟವಂತ. ಶಿಕ್ಷೆ ಪ್ರಕಟವಾಗಿದ್ದರೂ ಆತ ಜೈಲಿಗೆ ಹೋಗುವುದರಿಂದ ವಿನಾಯ್ತಿ ಪಡೆಯಲಿದ್ದಾನೆ. ಸ್ಪೇನ್‌ನಲ್ಲಿ ಒಂದು ಕಾನೂನಿದೆ. 2 ವರ್ಷಕ್ಕಿಂತ ಕಡಿಮೆ ಅವಧಿಯ ಶಿಕ್ಷೆ ಪಡೆದಾತ ಮಾಡಿದ್ದು ಮೊದಲ ಅಪರಾಧವಾಗಿದ್ದರೆ ಶಿಕ್ಷೆಯನ್ನು ಸಸ್ಪೆಂಡ್ ಮಾಡಬಹುದು! ಈ ನಿಯಮದನ್ವಯವೇ ಮೆಸ್ಸಿ ಜೈಲಿನಿಂದ ಪಾರಾಗಲಿದ್ದಾನೆ. ಈತನ ಅಪ್ಪ ಜಾರ್ಜ್ ಮೆಸ್ಸಿಗೂ ಈ ಅಪರಾಧದಲ್ಲಿ ಪಾಲಿದೆ. ಏಕೆಂದರೆ ಮಗನ ಆರ್ಥಿಕ ವಹಿವಾಟುಗಳನ್ನು ಮ್ಯಾನೇಜರ್ ಆಗಿ ಅಪ್ಪನೇ ನೋಡಿಕೊಳ್ಳುವುದು. ಆತನಿಗೂ 21 ತಿಂಗಳ ಜೈಲು ಶಿಕ್ಷೆ ವಿಧಿಸಿದ್ದು ತೆರಿಗೆ ವಂಚನೆಯಲ್ಲಿ ಆತ ಸ್ವಲ್ಪ ಪಾಲು ಕಟ್ಟಿರುವುದರಿಂದ ಜೈಲಿನಿಂದ ಪಾರಾಗಲಿದ್ದಾನೆ.

ಬೇರೆ ಶ್ರೀಮಂತರು ಮಾಡಿದ್ದನ್ನೇ ಮೆಸ್ಸಿಯೂ ಮಾಡಿದ್ದಾನೆ ಎಂದು ಆತನ ಅಭಿಮಾನಿಗಳು ಸಮರ್ಥಿಸಿಕೊಳ್ಳುತ್ತಿದ್ದಾರೆ. ತನ್ನ ಆದಾಯಕ್ಕೆ ತೆರಿಗೆ ಕಟ್ಟುವ ಬದಲು ಮೆಸ್ಸಿ ತೆರಿಗೆ ಸ್ವರ್ಗಗಳಾದ ಬಿಲೈಜ್ ದ್ವೀಪ ಮತ್ತು ಉರುಗ್ವೆಯಲ್ಲಿ ನಕಲಿ ಕಂಪೆನಿಗಳನ್ನು ಸ್ಥಾಪಿಸಿದ್ದ. ಅವುಗಳ ಮೂಲಕ ಬೇನಾಮಿ ವಹಿವಾಟು ನಡೆಸುತ್ತಿದ್ದ.

ಹಣದ ವಿಷಯದಲ್ಲಿ ಹೀಗೆ ಮೆಸ್ಸಿ ಎಷ್ಟೇ ಜಿಪುಣತನ ತೋರಿಸಿದ್ದರೂ, ಫುಟ್‌ಬಾಲ್ ಮೈದಾನದಲ್ಲಿ ಗೋಲು ಹೊಡೆಯುವ ವಿಚಾರದಲ್ಲಿ ಈತ ಧಾರಾಳಿ. ಸ್ಪೇನ್‌ನ ಬಾರ್ಸಿಲೋನಾ ಕ್ಲಬ್ ಪರ ಈಗಾಗಲೆ 500 ಗೋಲುಗಳನ್ನು ಹೊಡೆದು ಸ್ಥಾಪಿಸಿರುವ ವಿಶ್ವದಾಖಲೆಯೇ ಈತನ ಖ್ಯಾತಿಯನ್ನು ಎತ್ತಿ ತೋರುತ್ತದೆ. ಅರ್ಜೆಂಟೀನಾ ದೇಶದ ಪರ ಆಡುವ ಈತ, ಒಟ್ಟು 55 ಗೋಲುಗಳನ್ನು ಹೊಡೆದಿರುವುದೂ ದಾಖಲೆ. ಈಗಾಗಲೆ ಐದು ಬಾರಿ ವಿಶ್ವದ ಅತ್ಯುತ್ತಮ ಆಟಗಾರ ಎಂಬ ಫಿಫಾ ಪ್ರಶಸ್ತಿಯನ್ನು ಗೆದ್ದಿದ್ದು, ಈ ಸಾಧನೆ ನಡೆಸಿದ ವಿಶ್ವದ ಏಕೈಕ ಆಟಗಾರನೀತ.

ಇನ್ನೂ 30ರ ಹರೆಯದ ಮೆಸ್ಸಿ (ಬರ್ತ್‌ಡೇ 24–6–1987) ವಿಶ್ವಾದ್ಯಂತ ಲಕ್ಷಾಂತರ ಅಭಿಮಾನಿಗಳನ್ನು ಹೊಂದಿದ್ದಾನೆ. ಮೈದಾನದಲ್ಲಿ ಆತನ ಆಟ ನೋಡುವುದೊಂದು ಮಾಂತ್ರಿಕ ಅನುಭವ. ಚೆಂಡು ಇಲ್ಲದೆ ಎಷ್ಟು ವೇಗವಾಗಿ ಓಡಬಲ್ಲನೋ ಅಷ್ಟೇ ವೇಗವಾಗಿ ಚೆಂಡಿನೊಂದಿಗೆ ಓಡುವ ಈತನ ಸಾಮರ್ಥ್ಯ ಎದುರಾಳಿಗಳನ್ನು ಬೆಚ್ಚಿಬೀಳಿಸುತ್ತದೆ. ಈತ ಓಡುತ್ತಿರುವಾಗ ಚೆಂಡು ಈತನ ಕಾಲಿಗೆ ಅಂಟಿದಂತೆಯೇ ಇರುತ್ತದೆ! ಇತರ ಆಟಗಾರರಿಗೆ ಹೋಲಿಸಿದರೆ ಸ್ವಲ್ಪ ಕುಳ್ಳಗೆ ಇರುವ ಈತ (ಎತ್ತರ 5 ಅಡಿ 7 ಇಂಚು) ಫಾರ್ವರ್ಡ್ ಆಟಗಾರನಾಗಿ ಎಡ, ಬಲ ಮತ್ತು ಮಧ್ಯೆ– ಹೀಗೆ ಮೂರೂ ಸ್ಥಾನಗಳಲ್ಲಿ ಅದ್ಭುತವಾಗಿ ಆಡಬಲ್ಲ. ‘ಈತನೊಬ್ಬ ಅನ್ಯಗ್ರಹಜೀವಿ. ಫುಟ್‌ಬಾಲ್ ಆಡಲೆಂದೇ ಇಲ್ಲಿಗೆ ಬಂದಿದ್ದಾನೆ’ ಎಂದು ಈತನ ಬಗ್ಗೆ ತಮಾಷೆಯ ಮಾತೂ ಇದೆ. ಎಂತಹ ಅಬೇಧ್ಯ ರಕ್ಷಣೆಯ ಗುಂಪನ್ನೂ ವಂಚಿಸಿ ಏಕಾಂಗಿಯಾಗಿ ಚೆಂಡನ್ನು ಗೋಲ್‌ಪೋಸ್ಟ್‌ಗೆ ತಲುಪಿಸಬಲ್ಲ ಚಾಣಾಕ್ಷನೀತ.

13ರ ಎಳವೆಯಲ್ಲಿ ಈತ ದೈಹಿಕ ಬೆಳವಣಿಗೆಯ ಹಾರ್ಮೋನ್ ಕೊರತೆಯಿಂದ ಬಳಲುತ್ತಿದ್ದ. ಈತನ ಚಿಕಿತ್ಸೆಯ ವೆಚ್ಚ ಭರಿಸಲು ಬಾರ್ಸಿಲೋನಾ ಕ್ಲಬ್ ಸಿದ್ಧವಿತ್ತು, ಅದಕ್ಕೆಂದೇ ಅರ್ಜೆಂಟೀನಾದಿಂದ ಸ್ಪೇನ್‌ಗೆ ಬಂದು ಬಾರ್ಸಿಲೋನಾ ಕ್ಲಬ್ ಸೇರಿದ. ಮೂರೇ ವರ್ಷಗಳಲ್ಲಿ ತನ್ನ ಸಾಮರ್ಥ್ಯ ತೋರಿಸಿದ. ಚಿಕ್ಕಂದಿನಲ್ಲಿ ಕುಳ್ಳ, ದುರ್ಬಲ ಎಂದೆಲ್ಲ ಗೇಲಿಗೆ ಒಳಗಾಗಿದ್ದ ಮೆಸ್ಸಿ, ಈಗ ತಂಡಕ್ಕೆ ಅನಿವಾರ್ಯ ಶಕ್ತಿ. ‘ಫಾರ್ಮ್‌ನಲ್ಲಿ ಇಲ್ಲದಿದ್ದರೂ, ಗಾಯಗೊಂಡು ವೇಗವಾಗಿ ಆಡಲಾಗದಿದ್ದರೂ ಮೆಸ್ಸಿ ತಂಡದಲ್ಲಿ ಇದ್ದರೆ ಸಾಕು, ಎದುರಾಳಿಗಳು ಒತ್ತಡಕ್ಕೆ ಒಳಗಾಗುತ್ತಾರೆ. ಆಗ ನಾವು ಚೆನ್ನಾಗಿ ಆಡಬಹುದು’ ಎನ್ನುವುದು ಈತನ ಅರ್ಜೆಂಟೀನಾ ತಂಡದ ಸಹ ಆಟಗಾರರ ಮಾತು.



ಜಗತ್ತಿನ ಬಹುತೇಕ ಐಶಾರಾಮಿ ಕಾರುಗಳನ್ನು ಹೊಂದಿರುವ, ಅಡಿಡಾಸ್, ಪೆಪ್ಸಿ, ಇಎ ಸ್ಪೋರ್ಟ್ಸ್, ಟಾಟಾ ಮೋಟರ್ಸ್, ಜಿಲೆಟ್, ಸ್ಯಾಮ್‌ಸಂಗ್ ಮುಂತಾದ ಪ್ರತಿಷ್ಠಿತ ಕಂಪೆನಿಗಳ ರಾಯಭಾರಿಯಾಗಿ ಕೋಟ್ಯಂತರ ಡಾಲರ್ ಸಂಭಾವನೆ ಪಡೆಯುವ (ಅಡಿಡಾಸ್ ಒಂದರಿಂದಲೇ ವರ್ಷಕ್ಕೆ 4 ಕೋಟಿ ಡಾಲರ್ ಬರುತ್ತಿದೆ), ಜಗತ್ತಿನ ಎರಡನೇ ಅತ್ಯಂತ ಶ್ರೀಮಂತ ಕ್ರೀಡಾಳು ಎಂಬ ಖ್ಯಾತಿ ಹೊಂದಿರುವ ಈತ ಜುಜುಬಿ 24 ಲಕ್ಷ ಡಾಲರ್ ತೆರಿಗೆ ವಂಚಿಸಲು ಹೋಗಿ ಶಿಕ್ಷೆಗೆ ಗುರಿಯಾಗಿರುವುದು ತಮಾಷೆಯೆಂಬಂತೆ ಕಾಣಿಸುತ್ತಿದೆಯೆ? ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65